

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ನಂಬಿಯೂ ನಂಬದ ದುಃಸ್ಥಿತಿ!....

ಹಳ್ಳಿಗಳಲ್ಲಿ ಮಕ್ಕಳಿಗೆ ಓದಲು ಶಾಲೆ ಇದೆಯೋ ಇಲ್ಲವೋ, ಜನರಿಗೆ ಕುಡಿಯಲು ನೀರು ಇದೆಯೋ ಇಲ್ಲವೋ, ಓಡಾಡಲು ಸರಿಯಾದ ರಸ್ತೆ ಇದೆಯೋ ಇಲ್ಲವೋ, ಚಿಕಿತ್ಸೆಗೆ ಆಸ್ಪತ್ರೆ ಇದೆಯೋ ಇಲ್ಲವೋ, ಮಂದಿರ-ಮಸೀದಿ-ಚರ್ಚುಗಳಂತೂ ಪೈಪೋಟಿಯ ಮೇಲೆ ಕೋಟ್ಯಂತರ ರೂ. ವೆಚ್ಚದಲ್ಲಿ ಒಂದರ ಮೇಲೊಂದು ನಿರ್ಮಾಣವಾಗುತ್ತಿವೆ. ಇದನ್ನು ನೋಡಿದಾಗ ಬಸವಣ್ಣನವರ ವಚನ ನೆನಪಾಗುತ್ತದೆ:

**ಮಡಕೆ ದೈವ, ಮೊರ ದೈವ, ಬೀದಿಯ ಕಲ್ಲು ದೈವ**
**ಹಣಿಗೆ ದೈವ, ಬಿಲ್ಲನಾರಿ ದೈವ, ಕಾಣಿರೋ**
**ಕೊಳಗ ದೈವ, ಗಿಣ್ಣಿಲು ದೈವ, ಕಾಣಿರೋ**
**ದೈವ ದೈವವೆಂದು ಕಾಲಿಡಲಿಂಬಿಲ್ಲಾ!**
**ದೈವನೊಬ್ಬನೆ ಕೂಡಲ ಸಂಗಮದೇವ!**

ಕಾಲಿಡಲು ಜಾಗವಿಲ್ಲದಷ್ಟು ದೇವರುಗಳ ಪೂಜಾತಾಣಗಳು ನಿರ್ಮಾಣವಾಗುತ್ತಿವೆಯೆಂಬ ಈ ಮಾತು ಈಗಲೂ ಅದೆಷ್ಟು ವಾಸ್ತವ! ಯಾವ ಕಾಲದಲ್ಲಿ ಯಾರು ಈ ದೇವರುಗಳ ಸೆನ್ಸಸ್ (Census) ಮಾಡಿದ್ದರೋ ಏನೋ ಗೊತ್ತಿಲ್ಲ. ಪ್ರಾಚೀನಕಾಲದಿಂದ ಜನರು ನಂಬಿಕೊಂಡು ಬಂದ ಒಂದು ಲೆಕ್ಕಾಚಾರದ ಪ್ರಕಾರ ಭಾರತದಲ್ಲಿ ಒಟ್ಟು ಮೂವತ್ತುಮೂರು ಕೋಟಿ ದೇವರುಗಳು ಇವೆ. ಬಸವಣ್ಣನವರ ವಚನಗಳಲ್ಲಿಯೇ ಈ 'ತೆತ್ತೀಸಕೋಟಿ' ದೇವತೆಗಳ ಸಂಖ್ಯೆಯ ಉಲ್ಲೇಖವಿರುವುದರಿಂದ 12ನೆಯ ಶತಮಾನದಿಂದ ಇಲ್ಲಿಯವರೆಗೆ ಈ ದೇವರುಗಳ ಸಂಖ್ಯೆ ಅದೆಷ್ಟು ಬೆಳೆದಿದೆಯೋ ಆ ಕೂಡಲಸಂಗನೇ ಬಲ್ಲ! ದೇವರುಗಳ ಸಂಖ್ಯೆಯೇ ಇಷ್ಟಿರುವಾಗ ಅವುಗಳ ಹೆಸರಿನಲ್ಲಿರುವ ಗುಡಿಗುಂಡಾರಗಳ ಸಂಖ್ಯೆ ಇನ್ನೆಷ್ಟಿರಬಹುದು. ಕಳೆದ ಶತಮಾನದಿಂದ ಇಂಗ್ಲೆಂಡ್, ಅಮೇರಿಕಾದಿ ರಾಷ್ಟ್ರಗಳಲ್ಲಿಯೂ ದೇವಸ್ಥಾನಗಳು ಮೈದಾಳಿರುವುದರಿಂದ ಮತ್ತು ಮನುಷ್ಯರು ಸತ್ತಂತೆ ದೇವರು ಸಾಯುವುದಿಲ್ಲವಾದ ಕಾರಣ ದೇವರುಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ geometric progression ನಲ್ಲಿ ಪ್ರಪಂಚದ ಜನಸಂಖ್ಯೆಯನ್ನು ಮೀರುವಷ್ಟು ಬೆಳೆದಿರಲೇಬೇಕು. ಭಾರತ ಸ್ವತಂತ್ರಗೊಂಡ ಮೇಲೆ ಒಮ್ಮೆಯೂ ಈ ದೇವರುಗಳ ಸೆನ್ಸಸ್ ಪರಿಷ್ಕೃತಗೊಂಡಂತೆ ಕಾಣುವುದಿಲ್ಲ. 'ಭಕ್ತಿಸಂಪನ್ನ' ಮತದಾರರನ್ನು ಓಲೈಸಲು ಇಂತಹ ಒಂದು ವಿಶಿಷ್ಟ ಯೋಜನೆ ಯಾವ ರಾಜಕೀಯ ಪಕ್ಷದ ಚುನಾವಣಾಪ್ರಣಾಳಿಕೆಯಲ್ಲೂ ಇದುವರೆಗೆ ಪ್ರಕಟವಾದಂತಿಲ್ಲ. ಮಂದಿರ-ಮಸೀದಿ-ಚರ್ಚುಗಳನ್ನು ಕಟ್ಟಲು ಜನರು ಧಾರಾಳವಾಗಿ ದೇಣಿಗೆಯನ್ನು ಕೊಟ್ಟಂತೆ ಒಂದು ಶಾಲೆಯ ಕಟ್ಟಡವನ್ನು ಕಟ್ಟಲು ಕೊಡುವುದಿಲ್ಲ. ಇದನ್ನು ನಮ್ಮ ಜನರ ಧಾರ್ಮಿಕ ಶ್ರದ್ಧೆ ಎನ್ನೋಣವೇ, ವೈಚಾರಿಕತೆಯ ಕೊರತೆ ಎನ್ನೋಣವೇ, ಒಟ್ಟಾರೆ "ಹೊಟ್ಟೆಗೆ ಹಿಟ್ಟಿಲ್ಲ, ಜುಟ್ಟಿಗೆ ಮಲ್ಲಿಗೆ ಹೂವು" ಎಂಬ ಗಾದೆ ಮಾತಿನಂತಾಗಿದೆ.

ಕಳೆದ ವಾರ ಹೋಗಿದ್ದ ಅಡಿಕೆ ಬೆಳೆಯುವ ಒಂದು ಹಳ್ಳಿಯ ದೇವಸ್ಥಾನದ ಕಾರ್ಯಕ್ರಮದಲ್ಲಿ ನಮಗೆ ಉಂಟಾದ ಅನುಭವ ತೀರಾ ಅಸಹ್ಯಕರ. ದೇವಾಲಯದ ಪ್ರಾಂಗಣವನ್ನು ಪ್ರವೇಶಿಸುತ್ತಿದ್ದಂತೆಯೇ ನೆಲದ ಮೇಲೆ ಹಾಸಿದ್ದ 'ರೆಡ್‌ಕಾರ್ಪೆಟ್' ಮೇಲೆ ನಮ್ಮ ಕಣ್ಣಿಗೆ ಬಿದ್ದದ್ದು ಭಕ್ತಾದಿಗಳು ಆಸ್ವಾದಿಸಿ ಅಲ್ಲಲ್ಲಿ ಬಿಸಾಡಿದ್ದ 'ಗುಟ್ಕಾ ಪ್ರಸಾದ'ದ ಪ್ಯಾಕೆಟ್‌ಗಳು! ಸದ್ಯ ಅವನ್ನು ದೇವರಿಗೆ ನೈವೇದ್ಯ ಮಾಡದೆ ಇರುವುದು ದೇವರ ಪುಣ್ಯ! ಒಂದು ಕಡೆ ಗುಡಿಯೊಳಗೆ ಭಕ್ತಿಯಿಂದ ದೇವರ ಪ್ರಸಾದಕ್ಕೆ ಕೈಯೊಡ್ಡುವ, ಮತ್ತೊಂದು ಕಡೆ ದೇವರ ಕಣ್ಮುಂದೇ ಗುಟ್ಕಾ ಸೇವಿಸುವ ಈ ಜನರ 'ಗುಪ್ತಭಕ್ತಿ'ಗೆ ಅಳಬೇಕೋ ನಗಬೇಕೋ ತಿಳಿಯದಾಗಿದೆ.

ಗುಡಿಯಲ್ಲಿರುವ ದೇವರ ವಿಗ್ರಹಕ್ಕೆ ಮಾಡುವ ನಾನಾ ನಮೂನೆಯ ಪೂಜಾಲಂಕಾರಗಳಲ್ಲಿ "ನವನೀತ ಅಲಂಕಾರ"ವೂ ಒಂದು. ನವನೀತ ಎಂದರೆ ಬೆಣ್ಣೆ. ಸಂಸ್ಕೃತಬಾರದ ಹಳ್ಳಿಜನರು ಇದನ್ನು ಅಪ್ಪಟಕನ್ನಡದಲ್ಲಿ 'ಬೆಣ್ಣೆಸೇವೆ' ಎಂದು ಕರೆಯುತ್ತಾರೆ. ದೇವರ ವಿಗ್ರಹದ ಮೈತುಂಬಾ ಬೆಣ್ಣೆಯನ್ನು ಮೆತ್ತಿ ಅಲಂಕಾರ ಮಾಡಿರುತ್ತಾರೆ. ಇದು 'ಬೆಣ್ಣೆಸೇವೆ'ಯೋ ಅಥವಾ ದೇವರಿಗೆ 'ಬೆಣ್ಣೆಹಚ್ಚುವ' ಕೆಲಸವೋ ಆಯಾಯ ಭಕ್ತರ ಮನಃಸ್ಥಿತಿಯನ್ನು ಅವಲಂಬಿಸಿರುತ್ತದೆ. 'ಬೆಣ್ಣೆಯ ಕಳ್ಳ' ಉಡುಪಿಯ ಕೃಷ್ಣನಿಗಂತೂ ಇದು ಬಹಳ ಇಷ್ಟ ಎಂಬುದು ಕೃಷ್ಣನ ಭಕ್ತರೆಲ್ಲರಿಗೂ ಗೊತ್ತಿರುವ ಸಂಗತಿ. ದಾವಣಗೆರೆಯ ವೈದ್ಯರು ಮತ್ತು ವರ್ತಕರುಗಳಿಗೆ ಬೆಳಗ್ಗೆ ವಾಯುವಿಹಾರ ಹೊರಟು ಮನೆಗೆ ಬರುವುದರೊಳಗೆ ದಾರಿಯಲ್ಲಿ ಹೇಗೆ 'ಬೆಣ್ಣೆದೋಸೆ' ಬಹಳ ಇಷ್ಟವೋ ಹಾಗೆ. ಯಾವ ಉದ್ದೇಶಕ್ಕಾಗಿ ಈ ಜನ ಬೆಳಿಗ್ಗೆ ವಾಯುವಿಹಾರ ಹೊರಡುತ್ತಾರೋ ಆ ಉದ್ದೇಶ ಈಡೇರದೆ ಮನೆ ಸೇರುವ ಮೊದಲೇ ಸೀದಾ ಆಸ್ಪತ್ರೆ ಸೇರಿದರೆ ಆಶ್ಚರ್ಯವೇನಿಲ್ಲ! ಹಾಗೇನೆ ಭಕ್ತರು ಗುಡಿಗುಂಡಾರಗಳಿಗೆ ಹೋಗಿ ನಿಜವಾಗಿ ಏನನ್ನು ಪಡೆಯಬೇಕೋ ಆ ಉದ್ದೇಶವಾದರೂ ಭಕ್ತರ ಮನಸ್ಸಿನಲ್ಲಿದೆಯೇ ಎಂಬುದು ಪ್ರಶ್ನಾರ್ಹವಾಗಿದೆ. ಅದೇನೇ ಇರಲಿ, ಶಿಲ್ಪಶಾಸ್ತ್ರದ ದೃಷ್ಟಿಯಿಂದ ಈ ಬೆಣ್ಣೆಸೇವೆ, ಕ್ಷೀರಾಭಿಷೇಕ ಮೊದಲಾದ ಪೂಜಾಕೈಂಕರ್ಯಗಳ ಹಿನ್ನೆಲೆಯಲ್ಲಿ ದೇವರ ವಿಗ್ರಹವನ್ನು ಭಗ್ನವಾಗದಂತೆ, ದೀರ್ಘಕಾಲ ಕಾಂತಿಯುತವಾಗಿ ಹೊಳೆಯುವಂತೆ ಸಂರಕ್ಷಿಸುವ ನಿಹಿತ ಉದ್ದೇಶ ಇರಬಹುದು ಎನಿಸುತ್ತದೆ. ಇತ್ತೀಚೆಗೆ ಯಾವ ಶಾಸ್ತ್ರಗ್ರಂಥಗಳಲ್ಲಿಯೂ ಇರದ 'ಪಟಾಕಿಸೇವೆ' ಹೊಸದಾಗಿ ಸೇರ್ಪಡೆಯಾಗಿ ದೇವರ ಮೆರವಣಿಗೆಗಳಲ್ಲಿ ಜೋರಾಗಿ ನಡೆದಿದೆ.

ಒಮ್ಮೆ ಒಂದು ಹಳ್ಳಿಯಲ್ಲಿ ಇದೇ ರೀತಿ ದೇವಸ್ಥಾನದ ಕಾರ್ಯಕ್ರಮಕ್ಕೆಂದು ಹೋದಾಗ ಊರಬಾಗಿಲಿನಿಂದ ಅಲಂಕೃತವಾಹನದ ಮೇಲೆ ನಮ್ಮನ್ನು ಕೂರಿಸಿ ಮೆರವಣಿಗೆಯಲ್ಲಿ ಕರೆದೊಯ್ಯಲಾಯಿತು. ಸ್ವಲ್ಪ ದೂರದಲ್ಲಿ ಒಬ್ಬ ಪಟಾಕಿ ಸಿಡಿಸುತ್ತಿದ್ದ. ಸೂಕ್ಷ್ಮವಾಗಿ ಗಮನಿಸಿದಾಗ ಅವನು ಬಾಯಲ್ಲಿ ಬೀಡಿಯನ್ನು ಕಚ್ಚಿಕೊಂಡಿದ್ದ. ಮೆರವಣಿಗೆ ಸಾಗಿದಂತೆ ಅವನು ಬಾಯಲ್ಲಿದ್ದ ಬೀಡಿಯನ್ನು ಒಂದು ‘ದಂ’ ಎಳೆದು ಹೊರತೆಗೆದು ಎಡಗೈಯಲ್ಲಿ ಹಿಡಿದುಕೊಂಡು ಬಲಗೈಯಿಂದ ಒಂದೊಂದೇ ಪಟಾಕಿಯನ್ನು ಬೀಡಿಯ ಬೆಂಕಿಗೆ ತಾಕಿಸಿ ಸಿಡಿಸುತ್ತಿದ್ದ. ದಾರಿಯುದ್ದಕ್ಕೂ ಅವನು ಮಾಡಿದ ಈ ‘ಪಟಾಕಿಸೇವೆ’ ನಮಗೆ ತುಂಬಾ ಕುತೂಹಲಕಾರಿಯಾಗಿತ್ತು ಮತ್ತು ತೀರಾ ಒಗಟಾಗಿತ್ತು. ಅವನು ಪಟಾಕಿ ಹಚ್ಚಲು ಬೀಡಿ ಸೇದುತ್ತಿದ್ದಾನೋ, ಬೀಡಿ ಸೇದಲು ಪಟಾಕಿ ಸಿಡಿಸುತ್ತಿದ್ದಾನೋ ಎಂದು ವಿಚಾರಮಾಡುತ್ತಿರುವಾಗ ನಮಗೆ ನೆನಪಾಗಿದ್ದು “ಆಮ್ರಾಶ್ಚ ಸಿಕ್ತಾಃ ಪಿತರಶ್ಚ ತೃಪ್ತಾಃ” ಎಂಬ ಸಂಸ್ಕೃತ ಸೂಕ್ತಿ. ಮಾವಿನ ಮರದ ಕೆಳಗೆ ನಿಂತು ತರ್ಪಣ ಕೊಟ್ಟರೆ ಪರಲೋಕದಲ್ಲಿರುವ ಪಿತೃಗಳಿಗೂ ತೃಪ್ತಿಯಾಯಿತು, ಮಾವಿನ ಮರಗಳಿಗೂ ನೀರೆರೆದಂತಾಯಿತು ಎನ್ನುತ್ತದೆ ಈ ಸೂಕ್ತಿ. ಒಂದೇ ಕ್ರಿಯೆಯಿಂದ ಎರಡು ಕೆಲಸಗಳು ಈಡೇರುವಂತಿದ್ದರೆ ಅಂತಹ ಸಂದರ್ಭಗಳಲ್ಲಿ ಈ ಸೂಕ್ತಿಯನ್ನು ಬಳಸುತ್ತಾರೆ. ಅದಕ್ಕನುಗುಣವಾಗಿ ಮೆರವಣಿಗೆಯ ಸಂದರ್ಭದಲ್ಲಿ ಆ ಭಕ್ತನ ‘ಬೀಡಿಸೇವೆ’ ಮತ್ತು ‘ಪಟಾಕಿಸೇವೆ’ ಎರಡೂ ಸಾಂಗವಾಗಿ ನೆರವೇರಿದ್ದವು! ಆದರೆ ಅವುಗಳಲ್ಲಿ ನಾವು ಕಂಡಂತೆ ‘ಪಟಾಕಿಸೇವೆ’ಯೇ ಅವನಿಗೆ ಪ್ರಮುಖವಾಗಿತ್ತು ಎನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ. ಆ ಮುಗ್ಧನಿಗೆ ಗುರುಗಳ ಸಮ್ಮುಖದಲ್ಲಿ ಬೀಡಿ ಸೇದಬಾರದು ಎಂಬ ಅರಿವು ಇದ್ದಂತೆ ತೋರಲಿಲ್ಲ. ಮೆರವಣಿಗೆಯ ಉದ್ದಕ್ಕೂ ಬೀಡಿ ಹಚ್ಚಿ ಪಟಾಕಿ ಸಿಡಿಸುತ್ತಿದ್ದ ಅವನ ಉತ್ಸಾಹ ಒಂದು ರೀತಿಯ ಮೋಜೆನಿಸಿದರೂ ಅವನ ಆ ಮುಗ್ಧತೆ ನಮಗೆ ತುಂಬಾ ಸಂತೋಷವನ್ನುಂಟುಮಾಡಿತು!

**ಮೂರ್ಖೋ ವದತಿ ವಿಷ್ಣಾಯ ಜ್ಞಾನೀ ವದತಿ ವಿಷ್ಣವೇ ।**
**ದ್ವಯೋರೇವ ಸಮಂ ಪುಣ್ಯಂ ಭಾವಗ್ರಾಹೀ ಜನಾರ್ದನಃ ॥**

ದೇವರನ್ನು ಪ್ರಾರ್ಥಿಸುವಾಗ ದಡ್ಡನಾದವನು ‘ವಿಷ್ಣಾಯ ನಮಃ’ ಎಂದು ತಪ್ಪಾಗಿ ಹೇಳಿದರೆ ಪಂಡಿತನಾದವನು ‘ವಿಷ್ಣವೇ ನಮಃ’ ಎಂದು ಸರಿಯಾಗಿ ಹೇಳುತ್ತಾನೆ. ಆದರೆ ಇಬ್ಬರಿಗೂ ಸಮನಾಗಿ ಪುಣ್ಯ ಲಭಿಸುತ್ತದೆ. ಏಕೆಂದರೆ ದೇವರು ಭಕ್ತನ ಹೃದಯದಲ್ಲಿರುವ ಭಕ್ತಿಭಾವಗಳನ್ನು ಗ್ರಹಿಸುತ್ತಾನೆಯೇ ಹೊರತು ಭಕ್ತನ ಪ್ರಾರ್ಥನೆಯಲ್ಲಿ ವ್ಯಾಕರಣದೃಷ್ಟಿಯಿಂದ ಶುದ್ಧಪ್ರಯೋಗ ಯಾವುದು, ಅಶುದ್ಧಪ್ರಯೋಗ ಯಾವುದು ಎಂದು ತಪ್ಪು-ಒಪ್ಪುಗಳನ್ನು ಎತ್ತೆಣಿಸುವುದಿಲ್ಲ ಎನ್ನುತ್ತದೆ ಈ ಸಂಸ್ಕೃತ ಸುಭಾಷಿತ. ಆದರೆ ಅನೇಕ ವೇಳೆ ವ್ಯಾಕರಣಬದ್ಧವಾಗಿ ಮಂತ್ರೋಚಾರಣೆ ಮಾಡುವ ವೇದಾಗಮಶಾಸ್ತ್ರಪಾರಂಗತರಾದ ಪಂಡಿತರಿಗಿಂತ ತಪ್ಪುತಪ್ಪಾಗಿ ಮಂತ್ರಗಳನ್ನು ಉಚ್ಚರಿಸಿ ಮಂಗಳಾರತಿಯನ್ನು ಮಾಡುವ ಹಳ್ಳಿಯ ಪೂಜಾರಿಯ ಹೃದಯವೇ ಹೆಚ್ಚು ಭಕ್ತಿಸಂಪನ್ನವಾಗಿರುತ್ತದೆ ಎಂಬುದು ನಿಃಸಂಶಯ! ಕಾಳಹಸ್ತಿಯಲ್ಲಿ ಶಿವಲಿಂಗದ ಕಣ್ಣುಗಳಿಂದ ರಕ್ತ ಒಸರುತ್ತಿರುವುದನ್ನು ನೋಡಿ ಏನೋ ಅನಿಷ್ಟ ಕಾದಿದೆಯೆಂದು ಪೂಜಾರಿ ಹೆದರಿ ಓಡಿಹೋದ. ಆದರೆ ಯಾವ ಮಂತ್ರತಂತ್ರವನ್ನೂ ಅರಿಯದ ಕಾಡು ಮನುಷ್ಯ ಬೇಡರ ಕಣ್ಣಪ್ಪ ಮರುಗಿ ತನ್ನ ಕಣ್ಣನ್ನೇ ಕೊಟ್ಟು ಶಿವನ ಒಲುಮೆಯನ್ನು ಪಡೆದ!

ಕಾಶಿಗೆ ಯಾತ್ರಿಕರು ಹೋದಾಗ ಗಂಗಾನದಿಯಲ್ಲಿ ದಕ್ಷಿಣಾಭಿಮುಖವಾಗಿ ನಿಂತು ಕೈಬೊಗಸೆಯಲ್ಲಿ ಗಂಗಾಜಲವನ್ನು ಹಿಡಿದು ಕಣ್ಮುಚ್ಚಿ ಪರಲೋಕದಲ್ಲಿರುವ ಪಿತೃಗಳಿಗೆ ತರ್ಪಣವನ್ನು ಕೊಡುವುದು ಸಂಪ್ರದಾಯ. ಆದರೆ ಗುರುನಾನಕರು ಗಂಗಾನದಿಯ ದಡದಲ್ಲಿ ಪಶ್ಚಿಮಾಭಿಮುಖವಾಗಿ ನಿಂತು ಕೈಬೊಗಸೆಯಿಂದ ಗಂಗಾಜಲವನ್ನು ಚೆಲ್ಲುತ್ತಿದ್ದರಂತೆ. ಕಾಶೀಪಂಡಿತರು ಈತನು ಯಾರೋ ದಡ್ಡನಿದ್ದಾನೆಂದು ತಿಳಿದು ಏನು ಮಾಡುತ್ತಿದ್ದೀಯಾ ಎಂದು ಕೇಳಿದರು. ‘ಇಲ್ಲೇ ಹತ್ತಿರದಲ್ಲಿ ನನ್ನ ತೋಟವಿದೆ, ಅದಕ್ಕೆ ನೀರು ಹಾಯಿಸುತ್ತಿದ್ದೇನೆ’ ಎಂದು ಗುರುನಾನಕರು ಹೇಳಿದರಂತೆ. ಪಂಡಿತರು ನಕ್ಕು ‘ನಿನ್ನ ಕೈಬೊಗಸೆ ನೀರು ಇಲ್ಲಿಯೇ ದಡದಲ್ಲಿ ಬೀಳುತ್ತಿದೆ, ನಿನ್ನ ತೋಟಕ್ಕೆ ಹೇಗೆ ಹೋಗಲು ಸಾಧ್ಯ?’ ಎಂದು ಪ್ರಶ್ನಿಸಿದರು. ಅದಕ್ಕೆ ಗುರುನಾನಕರು ‘ನೀವು ಕೊಡುವ ತರ್ಪಣ ಮೇಲೆಲ್ಲೋ ಇರುವ ನಿಮ್ಮ ಪಿತೃಗಳಿಗೆ ತಲುಪಬಹುದಾದರೆ, ನನ್ನ ಈ ಬೊಗಸೆ ನೀರು ಹತ್ತಿರದಲ್ಲೇ ಇರುವ ತೋಟಕ್ಕೆ ಏಕೆ ತಲುಪಬಾರದು?’ ಎಂದು ಮರುಪ್ರಶ್ನೆ ಹಾಕಿದರಂತೆ!

ಈ ಕಥಾನಕ ಕೇಳಲು ರೋಚಕವಾಗಿಯೇನೋ ಇದೆ. ಆದರೆ ಧಾರ್ಮಿಕ ವಿಧಿವಿಧಾನಗಳು ಅವರವರ ನಂಬುಗೆ ಅಥವಾ ಶ್ರದ್ಧೆಗೆ ಸಂಬಂಧಪಟ್ಟ ವಿಚಾರಗಳು. ಒಬ್ಬರ ಆಚರಣೆ ಮತ್ತೊಬ್ಬರಿಗೆ ವಿಚಿತ್ರವಾಗಿ, ಹಾಸ್ಯಾಸ್ಪದವಾಗಿ ಕಾಣಿಸಬಹುದು. ಆದರೆ ವಿಭಿನ್ನ ಆಚರಣೆಗಳ ಹಿಂದಿರುವ ಸದಾಶಯವನ್ನು ಗುರುತಿಸಬೇಕಾದ್ದು ಇಲ್ಲಿ ಮುಖ್ಯವಾಗುತ್ತದೆ. ಉದಾಹರಣೆಗೆ ಸಿಖ್ಖರ ಧರ್ಮಗ್ರಂಥವಾದ ‘ಗುರುಗ್ರಂಥಸಾಹಿಬ್’ ಗ್ರಂಥವನ್ನೇ ತೆಗೆದುಕೊಳ್ಳೋಣ. ಶ್ರೀ ಗುರುನಾನಕ್‌ರವರಿಂದ ವಿರಚಿತಗೊಂಡ ಈ ಧರ್ಮಗ್ರಂಥ ಶ್ರೀ ಗುರು ಅರ್ಜುನ್ ಸಿಂಹ್‌ರವರಿಂದ ಪರಿಷ್ಕೃತಗೊಂಡು 10ನೆಯ ಗುರುವಾದ ಶ್ರೀ ಗುರುಗೋವಿಂದ ಸಿಂಹ್‌ರವರು ತಮ್ಮ ಕಾಲಾನಂತರ ಜೀವಂತ ಗುರುವಿನ ಪರಂಪರೆಯನ್ನು ಮುಂದುವರಿಸಲು ಇಷ್ಟಪಡದೆ ಈ ಧರ್ಮಗ್ರಂಥವನ್ನೇ ತಮ್ಮ ಮುಂದಿನ ಗುರುವನ್ನಾಗಿ ಸ್ವೀಕರಿಸಬೇಕೆಂದು ಘೋಷಣೆ ಮಾಡಿ ಅದನ್ನೇ ಆರಾಧಿಸಬೇಕೆಂದು ತಮ್ಮ ಅನುಯಾಯಿಗಳಿಗೆ ಕರೆಕೊಟ್ಟರು. ಅವರ ಆದೇಶಕ್ಕನುಗುಣವಾಗಿ ಪವಿತ್ರವಾದ ‘ಗುರುಗ್ರಂಥಸಾಹಿಬ್’ ಧರ್ಮಗ್ರಂಥವನ್ನೇ ಸ್ವರ್ಣಮಂದಿರದಲ್ಲಿ ಮತ್ತು ಗುರುದ್ವಾರಗಳಲ್ಲಿ ಇಟ್ಟು ಪೂಜಿಸಲಾಗುತ್ತಿದೆ. ಹಿಂದೂಗಳು ದೇವರಿಗೆ ಹೇಗೆ ಚಾಮರ ಬೀಸುತ್ತಾರೋ ಹಾಗೆ ಸಿಖ್ಖರು ಈ ಧರ್ಮಗ್ರಂಥಕ್ಕೆ ಚಾಮರ ಬೀಸುತ್ತಾರೆ; ನೈವೇದ್ಯ ಸಮರ್ಪಣೆ ಮಾಡುತ್ತಾರೆ. ಹಿಂದೂಗಳು ದೇವರ ವಿಗ್ರಹಗಳನ್ನು ಹೇಗೆ ಆರಾಧಿಸುತ್ತಾರೋ ಹಾಗೆ ಸಿಖ್ಖರು ಈ ಗ್ರಂಥವನ್ನು ತಮ್ಮ ಧರ್ಮಗುರುವೆಂದು ಆರಾಧಿಸುತ್ತಾರೆ. ಇದು ಅವರ ನಂಬಿಕೆ ಮತ್ತು ಶ್ರದ್ಧೆ. ಕಾಶಿಯಲ್ಲಿ ಓದುತ್ತಿದ್ದಾಗ ನಮ್ಮ ಆತ್ಮೀಯ ಮಿತ್ರರಾಗಿದ್ದ ಬೃಂದಾವನದ ಶ್ರೀ ಶ್ರೀವತ್ಸ ಗೋಸ್ವಾಮಿಯವರು ಒಮ್ಮೆ ನಮ್ಮನ್ನು ಜೈಪುರಕ್ಕೆ ಬರಮಾಡಿಕೊಂಡಿದ್ದರು. ಜೈಪುರದಲ್ಲಿ ಪ್ರಸಿದ್ಧವಾದ ‘ಶ್ರೀರಾಧಾಗೋವಿಂದಸ್ವಾಮಿ’ ಮಂದಿರವಿದೆ. ದೇವಾಲಯಕ್ಕೆ ನಮ್ಮನ್ನು ಕರೆದೊಯ್ದಾಗ ಅಲ್ಲಿ ಅರ್ಚಕರನ್ನು ಬಿಟ್ಟು ಬೇರೆಯವರಿಗೆ ದೇವಾಲಯದ ಗರ್ಭಗುಡಿಯೊಳಗೆ ಹೋಗಲು ಅವಕಾಶವಿಲ್ಲ. ನಾವು ಕಣ್ಣಾರೆ ಕಂಡಂತೆ ಹೊರಗಿನಿಂದ ಒಬ್ಬ ವೃದ್ಧಮಹಿಳೆ

ದೇವಾಲಯದ ಮೆಟ್ಟಿಲುಗಳನ್ನೇ ಮುಟ್ಟಿ ನಮಸ್ಕರಿಸಿ ಶ್ರೀಕೃಷ್ಣನ ಪಾದಗಳನ್ನು ಒತ್ತಿದಂತೆ ಒತ್ತುತ್ತಿದ್ದಳು. ದೇವಾಲಯದ ಕಲ್ಲಿನ ಮೆಟ್ಟಿಲುಗಳು ಶ್ರೀಕೃಷ್ಣನ ಪಾದಗಳಾಗಲು ಹೇಗೆ ಸಾಧ್ಯ ಎಂಬ ತಾರ್ಕಿಕ ಪ್ರಶ್ನೆಗೆ ಇಲ್ಲಿ ಉತ್ತರ ಸಿಕ್ಕುವುದಿಲ್ಲ. ಇದು ಆ ವೃದ್ಧೆಯ ಹೃದಯದಲ್ಲಿ ನೆಲೆಗೊಂಡಿದ್ದ ದೇವರ ಮೇಲಿನ ಭಕ್ತಿ ಮತ್ತು ಶ್ರದ್ಧೆ!

ಮಂದಿರ-ಮಸೀದಿ-ಗುರುದ್ವಾರ-ಚರ್ಚುಗಳು ಶ್ರದ್ಧಾಭಕ್ತಿಯ ಕೇಂದ್ರಗಳು. ಆತ್ಮಾವಲೋಕನ ಮಾಡಿಕೊಳ್ಳಬೇಕಾದ ತಾಣಗಳು. ಮನಸ್ಸಿನ ದೌರ್ಬಲ್ಯಗಳನ್ನು ಮೆಟ್ಟಿನಿಂತು ಮನಃಶಾಂತಿಯನ್ನು ಪಡೆಯಬೇಕಾದ ಆಧ್ಯಾತ್ಮಿಕ ಕೇಂದ್ರಗಳು. ಆದರೆ ಈಗ ಆಗುತ್ತಿರುವುದೇನು? ಧಾರ್ಮಿಕ ಕ್ಷೇತ್ರಗಳು ಶಸ್ತ್ರಾಸ್ತ್ರಗಳ ಆಗರವಾಗುತ್ತಿವೆ, ರಣರಂಗಗಳಾಗಿ ಪರಿಣಮಿಸುತ್ತಿವೆ. ಧ್ಯಾನ, ಪೂಜೆ ನಡೆಯಬೇಕಾದ ಪವಿತ್ರ ಸ್ಥಳಗಳಲ್ಲಿ ಕೊಲೆ, ರಕ್ತಪಾತ, ಹಿಂಸಾಚಾರ ಇತ್ಯಾದಿ ಹೇಯಕೃತ್ಯಗಳು ನಡೆಯುತ್ತಿವೆ. ಮೊನ್ನೆ ಮೊನ್ನೆ ಆಸ್ಟ್ರಿಯಾ ದೇಶದ ರಾಜಧಾನಿ ವಿಯೆನ್ನಾ ನಗರದ ಗುರುದ್ವಾರದಲ್ಲಿ ಧರ್ಮೋಪದೇಶ ಮಾಡುತ್ತಿದ್ದ ಸಿಖ್ಖರ ಧರ್ಮಗುರುವಿನ ಹತ್ಯೆಯಾಯಿತು. ಎಪ್ಪತ್ತರ ದಶಕದಲ್ಲಿ ನಾವು ವಿಯೆನ್ನಾವಿಶ್ವವಿದ್ಯಾನಿಲಯದಲ್ಲಿ ಓದುತ್ತಿದ್ದ ಎರಡು ವರ್ಷಗಳ ಅವಧಿಯಲ್ಲಿ ಅಲ್ಲಿ ಬಹುತೇಕ ಹೋಟೆಲ್ ಉದ್ದಿಮೆದಾರರಾಗಿರುವ ಸಿಖ್‌ಸಮುದಾಯದವರ ಮಧ್ಯೆ ಗುಂಪುಘರ್ಷಣೆಗಳು ನಡೆಯುತ್ತಿದ್ದ ಅಸ್ಪಷ್ಟ ನೆನಪು. ದೂರದ ವಿಯೆನ್ನಾದಲ್ಲಿ ನಡೆದ ಈ ಹತ್ಯೆಗೆ ಪಂಜಾಬಿನ ಜಲಂಧರ್‌ನ ರೈಲುಬಸ್ಸುಗಳು ಮಾಡಿದ ಸಂಚೇನು? ಅವೇನು ತಪ್ಪು ಮಾಡಿದ್ದವು? ಅವುಗಳನ್ನೇಕೆ ಬೆಂಕಿ ಹಚ್ಚಿ ಸುಡಬೇಕಾಗಿತ್ತು?

ಕೆಲವು ವರ್ಷಗಳ ಹಿಂದೆ ದಾವಣಗೆರೆಯಲ್ಲಿ ಕರ್ನಾಟಕ ರಸ್ತೆ ಸಾರಿಗೆ ಇಲಾಖೆಯ ಒಬ್ಬ ಬುದ್ಧಿವಂತ ಅಧಿಕಾರಿ ಇದ್ದರು. ನಗರದಲ್ಲಿ ನಡೆದ ಯಾವುದೋ ಘರ್ಷಣೆಯಲ್ಲಿ ಉದ್ರಿಕ್ತ ಗುಂಪೊಂದು ಬೆಂಕಿ ಹಚ್ಚಿ ಸುಟ್ಟಿದ್ದ ಬಸ್ಸನ್ನು ಆ ಅಧಿಕಾರಿ ಕ್ರೇನ್ ಮೂಲಕ ಎತ್ತಿಸಿಕೊಂಡು ಬಂದು ಬಸ್ ನಿಲ್ದಾಣದ ಪ್ರವೇಶದ್ವಾರದಲ್ಲಿ ಇಡಿಸಿದರು. ಸುಟ್ಟುಕರಕಲಾಗಿದ್ದ ಆ ಬಸ್ಸಿನ ಪಾರ್ಶ್ವಭಾಗದಲ್ಲಿ ಒಂದು ಬೋರ್ಡನ್ನು ತಗಲುಹಾಕಿದರು. ಅದರಲ್ಲಿ ಹೀಗೆ ಬರೆಯಲಾಗಿತ್ತು: "ಪ್ರಯಾಣಿಕರೇ, ನಾನೇನು ತಪ್ಪು ಮಾಡಿದೆನೆಂದು ನನಗೆ ಈ ಘೋರ ಶಿಕ್ಷೆ"! ಆ ಬಸ್ಸು ಮಾಡಿದ ಸೇವೆಯನ್ನು ನೆನೆಸಿಕೊಳ್ಳಿ. ಅದನ್ನು ಒಂದು ಜೀವವೆಂದು ಪರಿಗಣಿಸಿದರೆ ಅದು ಬದುಕಿದ್ದಾಗ ಎಷ್ಟೊಂದು ಜನ ಪ್ರಯಾಣಿಕರನ್ನು ಸುರಕ್ಷಿತವಾಗಿ ತನ್ನ ಒಡಲೊಳಗಿಟ್ಟುಕೊಂಡು ಈ ಕೆಟ್ಟರಸ್ತೆಗಳಲ್ಲಿ ಹಗಲುರಾತ್ರಿ ಎನ್ನದೆ ಓಡೋಡಿ ಅವರು ಬಯಸಿದ ಸ್ಥಳಕ್ಕೆ ಮುಟ್ಟಿಸಿಲ್ಲ. ಅದರ ಮೇಲೆ ಕರುಣೆ ಬೇಡವೇ? ಅಂತಹ ರೈಲುಬಸ್ಸುಗಳನ್ನು ಸುಡಲು ಮನಸ್ಸಾದರೂ ಹೇಗೆ ಬರುತ್ತದೆ. ಮನುಷ್ಯ ಎಷ್ಟು ಕೃತಘ್ನ ಮತ್ತು ನಿಷ್ಕರುಣಿ ಎಂಬುದಕ್ಕೆ ಇದ್ದಕ್ಕಿಂತ ಬೇರೆ ಉದಾಹರಣೆ ಬೇಕೆ? ವಿಯೆನ್ನಾದಲ್ಲಿರುವ ನಾಗರೀಕರು ಯಾರೂ ರೈಲು ಬಸ್ಸನ್ನು ಸುಟ್ಟಿಲ್ಲ. ಸಾವಿರಾರು ಮೈಲಿ ದೂರದಲ್ಲಿರುವ ನಮ್ಮ ದೇಶದಲ್ಲಿ ಏಕೆ ಈ ಹಿಂಸಾಚಾರ, ದೊಂಬಿ, ಗಲಭೆ? ಬಹುಶಃ ಇದಕ್ಕೆ ಕಾರಣ ನಮ್ಮ ದೇಶದ ಆಡಳಿತಯಂತ್ರದ ನಿಷ್ಕ್ರಿಯತೆ. ಈ ರೀತಿಯ ದೊಂಬಿ, ಗಲಭೆಗಳನ್ನು ಮಾಡದಿದ್ದರೆ ಪ್ರಧಾನಮಂತ್ರಿಯಾಗಲೀ, ಗೃಹಸಚಿವ/ವಿದೇಶಾಂಗಸಚಿವರಾಗಲೀ ಇತ್ತ ಗಮನಹರಿಸುತ್ತಿದ್ದರೇ? ಆಸ್ಟ್ರಿಯಾದೇಶದ ಸರ್ಕಾರವನ್ನು ಇಷ್ಟುಬೇಗ ಸಂಪರ್ಕಿಸುತ್ತಿದ್ದರೇ? ಎಂಬುದೇ ಅನುಮಾನಾಸ್ಪದ! ಜನರು ಗಲಾಟೆ ಎಬ್ಬಿಸಿದಾಗ ಮಾತ್ರ ನಮ್ಮ ಸರ್ಕಾರಗಳು ಎಚ್ಚರಗೊಳ್ಳುತ್ತವೆ; ಇಲ್ಲದಿದ್ದರೆ ಅವರ ಒಳಜಗಳ ಕಿತ್ತಾಟಗಳಲ್ಲಿಯೇ ಮುಳುಗಿರುತ್ತವೆ. ಪಾಪ, ನಮ್ಮ ವಿದೇಶಾಂಗ ಸಚಿವರು ಈಗತಾನೇ ಅಧಿಕಾರಕ್ಕೆ ಬಂದಿದ್ದಾರೆ. ಕಾದು ನೋಡೋಣ.

ವಿಯೆನ್ನಾ ಪ್ರಕರಣ ಒಂದೇ ಧರ್ಮೀಯರ ಎರಡು ಗುಂಪುಗಳ ಮಧ್ಯೆ ನಡೆದ ಸಂಘರ್ಷವಾದ್ದರಿಂದ ಅದರ ಪರಿಣಾಮವಾಗಿ ಜಲಂಧರ್‌ನಲ್ಲಿ ನಡೆದ ಹಿಂಸಾಚಾರ ವಿಶ್ವದಲ್ಲಿ ವ್ಯಾಪಕವಾಗಿ ಹರಡಿಲ್ಲ. ಒಂದು ಪಕ್ಷ ವಿಭಿನ್ನ ಧರ್ಮೀಯರ ಮಧ್ಯೆ ಆಗಿದ್ದರೆ ವಿಶ್ವದೆಲ್ಲೆಡೆ ಯಾವ ಪ್ರಮಾಣದಲ್ಲಿ ಹಿಂಸಾಚಾರ ಸಂಭವಿಸುತ್ತಿತ್ತು ಎಂಬುದು ಊಹೆಗೆ ನಿಲುಕದ ವಿಚಾರವೇನೂ ಅಲ್ಲ. ಧಾರ್ಮಿಕ ಇತಿಹಾಸದಲ್ಲಿ ಈ ಪ್ರಕರಣ ಮತ್ತೊಂದು ಕಪ್ಪುಚುಕ್ಕೆ. ಸಿಖ್‌ಧರ್ಮ ವೀರಶೈವಧರ್ಮದಂತೆ ಎಲ್ಲ ಜಾತಿಯವರನ್ನೂ ಒಳಗೊಂಡ ಧರ್ಮ. ಹಿಂದೂ ದೇವಾಲಯಗಳ ಗರ್ಭಗೃಹಕ್ಕೆ ಒಂದೇ ಒಂದು ದ್ವಾರವಿದ್ದರೆ ಅಮೃತಸರದಲ್ಲಿರುವ ಸಿಖ್ಖರ 'ಸ್ವರ್ಣಮಂದಿರ'ದ ಗರ್ಭಗೃಹಕ್ಕೆ ನಾಲ್ಕು ದ್ವಾರಗಳಿವೆ. ಎಲ್ಲ ದಿಕ್ಕುಗಳಿಂದಲೂ ಎಲ್ಲ ಜಾತಿಯ ಎಲ್ಲ ವರ್ಗದ ಜನರು ಬರಲಿ ಎಂಬುದು ಅದರ ಆಶಯವಾಗಿದೆ. ಸ್ವರ್ಣಮಂದಿರವನ್ನು ನಿರ್ಮಾಣಮಾಡುವಾಗ ಅದರ ಶಿಲಾನ್ಯಾಸವನ್ನು ಒಬ್ಬ ಮುಸಲ್ಮಾನ್ ಸಂತರಿಂದ ಮಾಡಿಸಲಾಗಿತ್ತು. ಬಾಲ್ಯಾವಸ್ಥೆಯಲ್ಲಿ ಕಿಲಕಿಲನೆ ನಗುವ ಮುಗ್ಧ ಮಗುವಿನ ಮುಖದಲ್ಲಿರುವ ಕಾಂತಿಯುತವಾದ ಕಣ್ಣುಗಳಿಗೆ ಕ್ರಮೇಣ ವಯಸ್ಸು ಕಳೆದಂತೆ ವೃದ್ಧಾವಸ್ಥೆಯಲ್ಲಿ ಪೊರೆಗಟ್ಟಿ ದೃಷ್ಟಿ ಮಂದವಾಗುತ್ತದೆ. ಹಾಗೆಯೇ ಜಗತ್ತಿನ ಎಲ್ಲ ಧರ್ಮಗಳ ಮೂಲಸಂಸ್ಥಾಪಕರ ವಿಶಾಲದೃಷ್ಟಿ ಮತ್ತು ಉದಾರತತ್ವಗಳಿಗೆ ಕಾಲಪುರುಷನ ಮಂಜು ಆವರಿಸುತ್ತದೆ. ಮೊನ್ನೆ ವಿಯೆನ್ನಾದ ಗುರುದ್ವಾರದಲ್ಲಿ ನಡೆದ ಬರ್ಬರ ಹತ್ಯೆಗೆ ಇದೇ ಕಾರಣ. ಒಂದೇ ಧರ್ಮದವರಾದರೂ ಉಚ್ಚ-ನೀಚ ಎಂಬ ಜಾತಿಮೂಲದ ವರ್ಗಭೇದ ಹೋಗದ ಕಾರಣ 'ಚಮ್ಮಾರ'ರೆಂಬ ದಲಿತವರ್ಗಕ್ಕೆ ಸೇರಿದ ಧರ್ಮಗುರುವಿನ ದಾರುಣ ಹತ್ಯೆ ಹಾಡುಹಗಲೇ ಉಚ್ಚವರ್ಗದವರಿಂದ ನಡೆದೇ ಹೋಯಿತು. ನೆಮ್ಮದಿಯಿಂದ ಬದುಕಲು ಮತ್ತು ಈ ಬದುಕಿಗೆ ಒಂದು ಅರ್ಥ ಬರಲು ಧರ್ಮ ಬೇಕೇ ಬೇಕು. ಆದರೆ ನಂಬಿದ ಧರ್ಮಗಳೇ ರಕ್ತಪಾತಕ್ಕೆ, ಹಿಂಸಾಚಾರಕ್ಕೆ ಕಾರಣವಾದರೆ ಯಾವ ಧರ್ಮವಾದರೂ ಏಕೆ ಬೇಕು ಎಂಬ ಪ್ರಶ್ನೆ ಉದ್ಭವಿಸುತ್ತದೆ. ಆದರೆ ಈ ತರಹದ ಸಂಘರ್ಷಕ್ಕೆ, ದುರ್ಘಟನೆಗಳಿಗೆ ಯಾವುದೇ ಧರ್ಮ ಕಾರಣವಲ್ಲ; ಆಯಾಯ ಧರ್ಮದ ಅನುಯಾಯಿಗಳ ಧರ್ಮಬಾಹಿರ ನಡವಳಿಕೆಗಳು ಕಾರಣ ಎಂಬುದನ್ನು ಮನಗಾಣಬೇಕಾಗಿದೆ.

ಒಬ್ಬ ಶ್ರೀಮಂತನಿದ್ದ. ಅವನಿಗೆ ತಾನು ದುಡಿದ ಹಣದಲ್ಲಿ ಏನಾದರೂ ಪುಣ್ಯಕಾರ್ಯ ಮಾಡಬೇಕೆಂದು ಮನಸ್ಸಾಯಿತು. ಒಂದು ದೇವಾಲಯವನ್ನು ಕಟ್ಟಿಸಿದ. ಹಬ್ಬಹರಿದಿನಗಳಂದು ಕೇವಲ ಹಿಂದೂಗಳು ದೇವರ ಪೂಜೆಗೆ ಬರಲಾರಂಭಿಸಿದರು. ಮುಸ್ಲಿಮರು ಬರುತ್ತಿರಲಿಲ್ಲ. ಇದನ್ನು ಗಮನಿಸಿದ ಆ ಶ್ರೀಮಂತ ಆ ದೇವಾಲಯದ ಪಕ್ಕದಲ್ಲಿ ಒಂದು ಮಸೀದಿಯನ್ನು ಕಟ್ಟಿಸಿದ. ಆ ಮಸೀದಿಗೆ ಪ್ರತಿ ಶುಕ್ರವಾರ ನಮಾಜಿಗೆಂದು ಮುಸ್ಲಿಮರು ಬರಲು ಆರಂಭಿಸಿದರು. ಕ್ರೈಸ್ತರು ಬರುತ್ತಿರಲಿಲ್ಲ. ಅವರಿಗಾಗಿ ಆ ಶ್ರೀಮಂತ ಒಂದು ಚರ್ಚನ್ನು ಕಟ್ಟಿಸಿಕೊಟ್ಟ. ಕ್ರೈಸ್ತ ಧರ್ಮೀಯರು ಪ್ರತಿ ಭಾನುವಾರ ಪ್ರಾರ್ಥನೆಗೆಂದು ಆ ಚರ್ಚಿಗೆ ಬರಲಾರಂಭಿಸಿದರು. ಎಲ್ಲರೂ ಈ ಜಗತ್ತಿಗೆ ದೇವರು

ಒಬ್ಬನೇ ಎಂದು ತಿಳಿದಿದ್ದರೂ ಯಾರೂ ಇನ್ನೊಬ್ಬರ ಪ್ರಾರ್ಥನಾ ತಾಣಗಳಿಗೆ ಹೋಗುತ್ತಿರಲಿಲ್ಲ. ಎಲ್ಲರೂ ಹೋಗಬಹುದಾದ ಎಲ್ಲರಿಗೂ ಉಪಯೋಗವಾಗಬಹುದಾದ ಒಂದು ಪುಣ್ಯಕಾರ್ಯವನ್ನು ಮಾಡಬೇಕೆಂದು ಮನಸ್ಸಾಗಿ ಆ ಶ್ರೀಮಂತ ಆ ಮಂದಿರ-ಮಸೀದಿ-ಚರ್ಚುಗಳ ಪಕ್ಕದಲ್ಲಿ ಒಂದು ಶೌಚಾಲಯವನ್ನು ಕಟ್ಟಿಸಿದನಂತೆ. ಆಗ ಹಿಂದೂಗಳು, ಮುಸ್ಲಿಮರೂ, ಕ್ರೈಸ್ತರೂ ಮತ್ತಿತರ ಎಲ್ಲ ಧರ್ಮೀಯರೂ ಯಾವ ಭಿನ್ನಭೇದವಿಲ್ಲದೆ ಅಲ್ಲಿಗೆ ಧಾವಿಸಿದರಂತೆ! ದೇವರು ಸರ್ವವ್ಯಾಪಿ, ಸರ್ವಶಕ್ತ, ಸರ್ವಜ್ಞ ಎಂದು ಎಲ್ಲ ಧರ್ಮಗಳು ನಂಬಿಯೂ ನಂಬಲಾಗದಂತಹ ದುಃಸ್ಥಿತಿಯನ್ನು ಮುಟ್ಟಲು ಕಾರಣರಾರು? ನಮ್ಮ ಮಂದಿರ-ಮಸೀದಿ-ಚರ್ಚುಗಳು ಒಂದು ಶೌಚಾಲಯಕ್ಕಿಂತಲೂ ಕಡೆಯೇ? ಒಬ್ಬ ಅನುಭಾವಿ ಹೇಳಿದ ಈ ಕೆಳಗಿನ ಶಾಯರಿಯನ್ನು ಗಮನವಿಟ್ಟು ಓದಿ ಹೇಳಿರಿ:

> **ವಾಯಿಜ್ ಮುಝೆ ಪೀನೇ ದೇ ಮಸ್‌ಜಿದ್ ಮೇಂ ಬೈಠ್‌ಕೇ**
> **ವರನಾ ವಹ್ ಜಗಹ್ ಬತಾ ಜಹಾಂ ಖುದಾ ನಹೀಂ!**
>
> **(ಮಸೀದಿಯಲ್ಲಿ ಕುಳಿತು ಮದಿರೆಯನ್ನು ಗುಟುಕರಿಸಲು**
> **ಬಿಡು ನನಗೆ ಓ ಮೌಲ್ವಿ!**
> **ಇಲ್ಲದಿರೆ ಹೇಳು ಆ 'ಖುದಾ' ಇಲ್ಲದ ತಾಣವೆಲ್ಲಿದೆ?**
> **ಕುಡಿಯುವೆನು ಹೋಗಿ ಅಲ್ಲಿಗೆ!)**

**27.5.2009**

**ಶ್ರೀ ತರಳಬಾಳು ಜಗದ್ಗುರು**
**ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು**
**ಸಿರಿಗೆರೆ**

❑